ಶ್ರೀ ಟಿ. ತಾರೇಗೌಡ.—ಉತ್ತರದಲ್ಲಿ ಪ್ರವಾಹ ಕಾಲದಲ್ಲಿ ಕಳ್ಳಿಂಬೆಳ್ಳ ಕೆರೆ ಕೋಡಿ ಒಡೆದು ಹೋದ ಮೇಲೆ ಅದರ ಕೆಳಗೆ 348 ಜನರಿಗೆ ಬಾವಿಗಳು ಹೋಗಿವೆ ಮತ್ತು 36 ಐ ಪಿ ಸೆಟ್ಸ್‌ಗಳು ಹೋಗಿವೆ, 362 ಮನೆಗಳು ಬಿದ್ದುಹೋಗಿವೆ, ಇದಕ್ಕೆ ಎಲ್ಲಾ ಒಟ್ಟು ನುಮಾರು 6 ಲಕ್ಷದ 65 ಸಾವಿರದ 805 ರೂ. ನಷ್ಟವಾಗಿದೆ ಎಂದು ವರದಿ ಮಾಡಿದ್ದಾರೆ. ತಾವು ಇದುವರೆಗೆ ಪರಿಹಾರ ಕೊಡುವ ಹಳ್ಳಿಗಳಲ್ಲಿ ಮುಖ್ಯವಾಗಿ ನಷ್ಟವಾಗಿರತಕ್ಕ ಹಳ್ಳಿಗಳನ್ನು ವರದಿಯಲ್ಲಿ ಸೇರಿಸಿಲ್ಲ ಅಮಲ ಗೊಂದಿ, ಉದ್ದಮಾನಹಾಳ್ಯ ಇವುಗಳನ್ನು ರೆವಿನ್ಯೂ ಮಂತ್ರಿಗಳು ಅವರು ಬಂದು ನೋಡಿದ್ದಾರೆ ಅಡಿಕೆ ತೋಟಗಳು ಎಲ್ಲಾ ಹಾಳಾಗಿ ಹೋಗಿವೆ.

ಅಧ್ಯಕ್ಷರು.—ಎಷ್ಟು ಕೊಟ್ಟಿಲ್ಲ, ಏನೇನು ಆಗಿದೆ ಎಂದು ಕೇಳಬೇಕು.

ಶ್ರೀ ಟಿ. ತಾರೇಗೌಡ.—ಅವರಿಗೆ ಹಣ ಯಾವಾಗ ಮಂಜೂರು ಮಾಡಿ ಕೊಡುತ್ತೀರಿ ?

† ಎಚ್. ಎಂ. ಚನ್ನಬಸಪ್ಪ.—ತಮಗೆ ಗೊತ್ತಿರುವಂತೆ ಮಿಂಚಿನ ವೇಗದಲ್ಲಿ ಈ ಕಾರ್ಯಕ್ರಮಗಳು ನಡೆದಿವೆ. ಹಣ ಕೂಡ ಕೊಟ್ಟಿದೆ. ಯಾರಿಗಾದರೂ ಕೊಟ್ಟಿಲ್ಲ ಎಂದರೆ ಅದನ್ನು ಗಮನಕ್ಕೆ ತಂದರೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಟಿ. ತಾರೇಗೌಡ—ತಾವು ಕೊಟ್ಟಿರುವ ಲೆಕ್ಕದಲ್ಲಿ ಲ್ಯಾಂಡ್ ಅಂಡ್ ಕ್ರಾಪ್ಸ್ 286, ಇರಿಗೇಷನ್ ವೆಲ್ಸ್ 82 ಐ ಪಿ ಸೆಟ್ಸ್ 36 ಇನ್ನು ಕೊಡಬೇಕಾದ್ದು ಇದೆ, ಕೊಟ್ಟಿಲ್ಲ ಎಂದು ಹೇಳಿದ್ದೀರಿ ಮಾರ್ಚ್ ಕೊನೆಯೊಳಗಾದರೂ ಅವರಿಗೆ ಹಣ ಪಾವತಿ ಮಾಡುವುದಕ್ಕೆ ಸಹಾಯ ಮಾಡುವಾಗುತ್ತದೆಯೇ ? ರೆವಿನ್ಯೂ ಮಂತ್ರಿಗಳಿಗೆ ಈ ವಿಚಾರ ತಿಳಿಸಿದ್ದೀನೆ. ಅವರಿಂದ ವಿಷಯ ತಿಳಿದು ಕೊಂಡು ಅದಕ್ಕಾಗಿ ಹಣ ಕೊಟ್ಟಿರುವುದು ಸರಿಯಾಗಿ ವಿತರಣೆಯಾಗುವಂತೆ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಡಿಷನಲ್ ಗ್ರಾಂಟ್ ಬೇಕು ಎಂದು ಕೇಳಿದ್ದಾರೆ ಅದನ್ನು ಮಂಜೂರು ಮಾಡಿ ಕೊಡಲಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಡಿಷನಲ್ ಗ್ರಾಂಟ್ ಎಷ್ಟು ಬೇಕು ಅಷ್ಟನ್ನು ರಿಲೀಸ್ ಮಾಡಿದೆ. ಅದು ಏನಿದ್ದರೂ ಹಂಚಿಕೆಯಾಗಬೇಕು. ಅದನ್ನು ಹಂಚಿಕೆ ಮಾಡಿ ಬಹಳ ಬೇಗ ಪೂರೈಸುತ್ತೇವೆ.

Tank at Budisettinahal in Koppal Taluk.

374. Sri M. VIRUPAKSHAPPA (Koppal).—

Will the Minister for Public Works and Electricity be pleaced to state :—

the reasons for not taking up the construction of tank at Budisettinahal village in Koppal taluk ?

Sri H. M. CHANNABASAPPA (Minister for Public Works and Electric.—

The works has not been taken up for want of sanction to the etimate.

ಶ್ರೀ ಎಂ. ವಿರೂಪಾಕ್ಷಪ್ಪ—ಈ ಕೆರೆಗೆ ಮಂಜೂರಾತಿ ಸಿಕ್ಕಿದೆ ಇದ್ದರೂ ಕ್ಷಾಮ ಪರಿಸ್ಥಿತಿಯನ್ನು ಅನುಲಕ್ಷಿಸಿ ತೀವ್ರವಾಗಿ ಕೆರೆಯನ್ನು ಮುಗಿಸುವ ಕಾರ್ಯಕ್ರಮವನ್ನು ಸರ್ಕಾರ ಇಟ್ಟುಕೊಂಡಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ—ಈ ಕೆರೆಯ ಅಂದಾಜನ್ನು ತೀವ್ರವಾಗಿ ಮಂಜೂರು ಮಾಡಿರುವುದಕ್ಕೆ ಕಾರಣ, ಅದನ್ನು ತೀವ್ರವಾಗಿ ಮಾಡಬೇಕು ಎನ್ನುವ ಉದ್ದೇಶದಿಂದಲೇ.